

# ಗಿನ್ನಿಸ್ ಹಿರಿಯಜ್ಜ

ಇತ್ತೀಚಿನ ಗಿನ್ನಿಸ್ ದಾಖಲೆಯ ಪ್ರಕಾರ ವಿಶ್ವದಲ್ಲೇ ಅತ್ಯಂತ ಹೆಚ್ಚು ಕಾಲ ಬದುಕಿರುವ ಗಂಡು ಎಂಬ ಖ್ಯಾತಿಗೆ ಪಾತ್ರನಾಗಿರುವುದು ಜಪಾನ್ ದೇಶದ ಜಿರೋಯಿಮಾನ್ ಕಿಮುರಾ. ಗಿನ್ನಿಸ್ ವರ್ಲ್ಡ್ ರೆಕಾರ್ಡ್‌ನ ಅಧಿಕೃತ ದಾಖಲೆಯ ಪ್ರಕಾರ ಈತ 115 ವರ್ಷ 252 ದಿನಗಳ ಕಾಲ ಬದುಕಿದ್ದು, 1998 ರಲ್ಲಿ ತೀರಿಕೊಂಡ ಮಾರ್ಟೆನ್ ಸೆನ್ ಎಂಬಾತನ ದಾಖಲೆಯನ್ನು ಕಿಮುರಾ ಮುರಿದಿದ್ದಾನೆ. ಜೀವಿತಾವಧಿಯಲ್ಲಿ ಮೂರು ಶತಮಾನಗಳನ್ನು ಕಂಡಿರುವ ವಿಶ್ವದ ಮೂರು ಜನರಲ್ಲಿ ಒಬ್ಬನಾದ ಕಿಮುರಾ ಹುಟ್ಟಿದ್ದು 1897, ಏಪ್ರಿಲ್ 19ರಂದು. ಜಪಾನಿನ ಕೊಟ್ಯಾಂಗೊ ನಗರದಲ್ಲಿ ಜನಿಸಿದ ಈತ ಅಂಚೆ ಕಚೇರಿಯಲ್ಲಿ ಕೆಲಸ ಮಾಡುತ್ತಿದ್ದು 65ನೇ ವಯಸ್ಸಿನಲ್ಲಿ ನಿವೃತ್ತಿ ಹೊಂದಿದ. ನಿವೃತ್ತಿ ನಂತರವೂ ತನ್ನ 90ನೇ ವಯಸ್ಸಿನವರೆಗೂ ಕೃಷಿ ಚಟುವಟಿಕೆಯಲ್ಲಿ ತೊಡಗಿಕೊಂಡಿದ್ದ ಈತನಿಗೆ, 14 ಮೊಮ್ಮಕ್ಕಳು 25 ಮರಿ ಮೊಮ್ಮಕ್ಕಳು ಹಾಗೂ 13 ಗಿರಿ ಮೊಮ್ಮಕ್ಕಳಿದ್ದಾರೆ. ಕಿಮುರಾನ ದೀರ್ಘಾಯುಷ್ಯದ ಗುಟ್ಟು 'ಕಡಿಮೆ ತಿನ್ನಿ ಹೆಚ್ಚು ಕಾಲ ಬಾಳಿ' ಎನ್ನುವುದಂತೆ.

■ ವಿನಯ ಕುಮಾರ್ ಬಿ.ಎಚ್.



